BOSE Communications

BRIGADE

| Publication | Sanjevani |
|---|---|
| Date | 14 Feb 2021 |



# ಶತಮಾನೋತ್ಸವ ಸಮಾರಂಭ

## ಗಾಯನದ ಮೆರುಗು

ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಶತಮಾನೋತ್ಸವ ಪ್ರದರ್ಶನ "ರವಿಶಂಕರ್ ಶತಮಾನೋತ್ಸವ ಕಾರ್ಯಕ್ರಮ"ಕ್ಕೆ ಸಂಗೀತ ಗಾಯನದ ಮೆರುಗು ಮತ್ತಷ್ಟು ಕಳೆಕಟ್ಟಲಿದೆ.

ಬೆಂಗಳೂರಿನ ಮುಂಚೂಣಿಯ ಹಿಂದೂಸ್ತಾನಿ ಸಂಗೀತಗಾರರಾದ ಕೊಳಲುವಾದಕ ಪ್ರವೀಣ್ ಗೋಡ್‌ಖಿಂಡಿ, ಗಾಯಕಿ ಸಂಗೀತ ಕಟ್ಟಿ ಮತ್ತು ಸಿತಾರ್ ವಾದಕರಾದ ಅನುಪಮಾ ಭಾಗವತ್ ಅವರು ಪಂಡಿತ್ ರವಿಶಂಕರ್ ಅವರು ಸೃಷ್ಟಿಸಿ ಜನಪ್ರಿಯಗೊಳಿಸಿದ ರಾಗ ಮತ್ತು ಸಂಯೋಜನೆಗಳನ್ನು ನುಡಿಸಲಿದ್ದಾರೆ. ಈ ಸಂಗೀತ ಕಛೇರಿಗೆ ಎಲ್ಲರಿಗೂ ಮುಕ್ತ ಪ್ರವೇಶವಿರುತ್ತದೆ. ಕೋವಿಡ್ ಶಿಷ್ಟಾಚಾರಗಳನ್ನು ಪಾಲಿಸಲಾಗುತ್ತದೆ.

ಫೆ.21ರಂದು ಮುಕ್ತಾಯವಾದರೆ, ಪಂಡಿತ್ ರವಿಶಂಕರ್ ಅವರ ಸಂಗೀತ ವಾದ್ಯಗಳಲ್ಲಿ ಮೂರು ಉಪಕರಣಗಳು ಐಎಂಇಎನಲ್ಲಿ ಕಾಯಂ ಆಗಿ ಸ್ಥಾನ ಪಡೆಯಲಿವೆ. ಗ್ರಾಮ್ಮಿ ಮ್ಯೂಸಿಯಂ ಎಲ್‌ಎ ಇಂದ ತಾಂತ್ರಿಕ ಮಾನ್ಯತೆ ಪಡೆದಿರುವ ಐಎಂಇ, 2020ರ ಟ್ರಿಪ್ ಅಡ್ವೈಸರ್ ಟ್ರಾವೆಲರ್ಸ್ ಚಾಯ್ಸ್ ಪ್ರಶಸ್ತಿ ಪಡೆದಿರುತ್ತದೆ.

ಐಎಂಇನ ಸಂಗ್ರಹಾಲಯ ನಿರ್ದೇಶಕರಾಗಿರುವ ಮಾನಸಿ ಪ್ರಸಾದ್ ಮಾತನಾಡಿ, "ಹಾಲ್ ಆಫ್ ಫೇಮ್‌ನಲ್ಲಿ ಪ್ರದರ್ಶನಕ್ಕಾಗಿ ಪಂಡಿತ್ ರವಿಶಂಕರ್ ಅವರ ಕಛೇರಿ ಉಡುಪು ಜೊತೆಗೆ ಅವರ ಸಿತಾರ್, ಸುರ್ ಬಹಾರ್ ಮತ್ತು ತಾನ್‌ಪುರ ಸೇರಿದಂತೆ ಮೂರು ವಾದ್ಯಗಳನ್ನು ಕಾಯಂ ಪ್ರದರ್ಶನಕ್ಕಾಗಿ ಮ್ಯೂಸಿಯಂಗೆ ದಾನವಾಗಿ ನೀಡಲಾಗಿದೆ.

ಯುವಜನರಲ್ಲಿ ಭಾರತೀಯ ಸಂಗೀತದ ಅರಿವು ಮತ್ತು ಮೆಚ್ಚುಗೆಯ ಮನೋಭಾವವನ್ನು ಮತ್ತಷ್ಟು ಆಳವಾಗಿಸುವುದಕ್ಕಾಗಿ ನಮ್ಮ ಮ್ಯೂಸಿಯಂನ ಬದ್ಧತೆಯನ್ನು ಇದು ದೃಢೀಕರಿಸುತ್ತದೆ. ಪಂಡಿತ್ ರವಿಶಂಕರ್ ಅವರು ನಿಜಕ್ಕೂ ಅಂತಾರಾಷ್ಟ್ರೀಯ ಕಲಾವಿದರಾಗಿದ್ದರಲ್ಲದೇ, ಇದೇ ಸಮಯದಲ್ಲಿ ಹಿಂದೂಸ್ತಾನಿ ಸಂಗೀತ ಸಂಪ್ರದಾಯದಲ್ಲಿ ಆಳವಾದ ಬೇರು ಹೊಂದಿದ್ದರು.

ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚು ಆಳವಾಗಿ ತೊಡಗಿಸಿ ಕೊಳ್ಳಲು ಅವರ ಜೀವನ ಕುರಿತ ನಮ್ಮ ವ್ಯಾಖ್ಯಾನ ಸ್ಫೂರ್ತಿ ನೀಡುವ ಭರವಸೆಯನ್ನು ನಾವು ಹೊಂದಿದ್ದೇವೆ. ಜನರು ನಮ್ಮ ವಸ್ತು ಸಂಗ್ರಹಾಲಯದೊಳಕ್ಕೆ







ಎಲ್ಲಿ :

ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಬ್ರಿಗೇಡ್ ಮಿಲೇನಿಯಂ ಅವೆನ್ಯೂ, ವುಡ್ ರೋಸ್ ಕ್ಲಬ್ ಎದುರು, ಜೆಪಿ ನಗರ, 7ನೇ ಹಂತ, ಬೆಂಗಳೂರು.

'ಜಾಗತಿಕ ಸಂಗೀತಗಾರ' ಕಾರ್ಯಕ್ರಮದ ಸಮಾರೋಪ ಫೆ. 21 ರಂದು ನಡೆಯಲಿದೆ. ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ ಆಯೋಜಿಸುತ್ತಿದೆ.

ಬಂದ ಈ ವಾದ್ಯಗಳನ್ನು ವೀಕ್ಷಿಸಬಹುದು ಎಂಬ ವಿಷಯದಲ್ಲಿ ನಾವು ಬಹಳ ಉತ್ಸಾಹಿತರಾಗಿದ್ದೇವೆ. ಪಂಡಿತ್ ರವಿಶಂಕರ್ ಅವರ ಜೀವನವನ್ನು ಅನುಭವಿಸುವ ಈ ಅವಕಾಶವನ್ನು ಜನರು ತಪ್ಪಿಸಿಕೊಳ್ಳಬಾರದು ಎಂದು ನಾವು ಆಗ್ರಹಿಸುತ್ತೇವೆ" ಎಂದರು.

ಶತಮಾನೋತ್ಸವ ಪ್ರದರ್ಶನವನ್ನು ರವಿಶಂಕರ್ ಫೌಂಡೇಷನ್ ಬೆಂಬಲದೊಂದಿಗೆ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಪಂಡಿತ್ ರವಿಶಂಕರ್ ಅವರ ಭಾರತರತ್ನ ಪ್ರಶಸ್ತಿ, ಗ್ರಾಮ್ಮಿ ಪ್ರಶಸ್ತಿ, ರಾಮನ್ ಮ್ಯಾಗ್‌ಸೆಸೆ ಪ್ರಶಸ್ತಿ, ಪೋಲಾರ್ ಮ್ಯೂಸಿಕ್ ಪ್ರೈಜ್, ಅವರ ಸಂಗೀತೋಪಕರಣಗಳು, ಉಡುಪುಗಳು ಮತ್ತು ಛಾಯಾಚಿತ್ರಗಳು ಮುಂತಾದವುಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಗುತ್ತಿದೆ.

ಇದಕ್ಕೆ ಇಂಟರಾಕ್ಟಿವ್ ಗ್ರಾಫಿಕ್ ಪ್ಯಾನಲ್‌ಗಳ ಬೆಂಬಲ ಇರುತ್ತದೆ. ಇವು ಗಣ್ಯ ಕಲಾವಿದರಾದ ರವಿಶಂಕರ್ ಅವರ ಜೀವನ ಮತ್ತು ಕಾರ್ಯವನ್ನು ಪ್ರದರ್ಶಿಸಲಿವೆ. ಗ್ರಾಮ್ಮಿ ಪ್ರಶಸ್ತಿ ವಿಜೇತ ರಿಕಿ ಕೇಜ್ ಅವರಿಂದ ಧ್ವನಿ ವಿನ್ಯಾಸ ಒಳಗೊಂಡಿರುವ 'ಎಕ್ಸ್‌ಪೀರಿಯನ್ಸ್ ಝೋನ್' ಈ ಪ್ರದರ್ಶನದ ವಿಶೇಷ ವೈಶಿಷ್ಟ್ಯವಾಗಿರುತ್ತದೆ.

ಒಂದು ವರ್ಷದ ಕಾಲ ನಡೆದ ಪ್ರದರ್ಶನದ ಪರಂಪರೆಯಾಗಿ ಶೀಘ್ರದಲ್ಲಿಯೇ ರವಿಶಂಕರ್ ಕುರಿತ ಆನ್‌ಲೈನ್ ವರ್ಚುವಲ್ ಪ್ರದರ್ಶನವನ್ನು ಅನಾವರಣಗೊಳಿಸಲಾಗುವುದು.